ಕರ್ನಾಟಕ ಸರ್ಕಾರ

ಸಂ:ಪುಅಬಿ/ಗಣತಿ/ಆರ್.ಆರ್.ಎ.ಪಿ/2018–19/794

ಆಡಳಿತಾಧಿಕಾರಿ ಹಾಗೂ
ಪುನರವಸತಿ ಅಧಿಕಾರಿಗಳ ಕಚೇರಿ,
ಕೃಮೇಯೋ, ಬೀಳಗಿ.
ದಿನಾಂಕ:27-11-2018. 26/11/2018

ಗೆ,

ಮಾನ್ಯ ಜಿಲ್ಲಾಧಿಕಾರಿಗಳು,
ಬಾಗಲಕೋಟ ಜಿಲ್ಲೆ,
ನವನಗರ, ಬಾಗಲಕೋಟ.

ಮಾನ್ಯರೇ,

ವಿಷಯ:–ಪುನರ್ ವಸತಿ ಹಾಗೂ ಪುನರ ವ್ಯವಸ್ಥೆಯ ಕರಡು ಯಾದಿಯನ್ನು ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟ ಪಡಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **ಬೀಳಗಿ** ತಾಲೂಕಿನ **ಕೊಪ್ಪ ಎಸ್.ಕೆ.** ಗ್ರಾಮದ ಪುನರವಸತಿ ಕೇಂದ್ರ ನಿರ್ಮಾಣಕ್ಕಾಗಿ ಹೆಚ್ಚುವರಿ ಜಮೀನುಗಳು ಮುಧೋಳ ತಾಲೂಕು ಹಲಗಲಿ ಗ್ರಾಮದ ಜಮೀನುಗಳು ಎಲ್.ಎ.ಕ್ಯೂ.ಎಸ್.ಆರ್/33/2013–14 (ಅಧಿಕ/ಹೆಚ್ಚುವರಿ) ರಡಿ ಭೂಸ್ವಾಧೀನಕ್ಕೊಳಪಡುವ ಜಮೀನು ಮಾಲೀಕರುಗಳಿಗೆ " ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆಯ ಅಧಿನಿಯಮ 2013" ರ ಕಲಂ 16(2) ರನ್ವಯ ಪುನರ್ ವಸತಿ ಹಾಗೂ ಪುನರ ವ್ಯವಸ್ಥೆಯ ಕರಡು ಯಾದಿಯನ್ನು ಈ ಪತ್ರಕ್ಕೆ ಲಗತ್ತಿಸಿ ತಮಗೆ ಸಲ್ಲಿಸುತ್ತಿದ್ದು, ಇದನ್ನು ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟ ಪಡಿಸಿ, ಪ್ರಕಟಪಡಿಸಿದ ದಿನಾಂಕವನ್ನು ಈ ಕಚೇರಿಗೆ ತಿಳಿಸಬೇಕಾಗಿ ತಮ್ಮಲ್ಲಿ ಗೌರವಪೂರ್ವಕವಾಗಿ ವಿನಂತಿಸಲಾಗಿದೆ.

ವಂದನೆಗಳೊಂದಿಗೆ,

ಕೃ.ಮೇ.ಯೋ
ಬಾಗಲ
ಸಂ
ದಿನಾ 29 NOV 2018
ಶಿರಸ್ತೇದಾರರು
ಮ್ಯಾನೇಜರ

ತಮ್ಮ ವಿಶ್ವಾಸಿ,

ಆಡಳಿತಾಧಿಕಾರಿ ಹಾಗೂ
ಪುನರ್ ವಸತಿ ಅಧಿಕಾರಿಗಳು
ಕೃಮೇಯೋ, ಬೀಳಗಿ.

ಪ್ರತಿಗಳು:

1. ಮಾನ್ಯ ಮಹಾವ್ಯವಸ್ಥಾಪಕರು, ಪುಮು, ಕೃಮೇಯೋ, ನವನಗರ, ಬಾಗಲಕೋಟ ರವರಿಗೆ ಸಲ್ಲಿಸುತ್ತ, ತಮ್ಮ ಕಚೇರಿಯ ವೆಬ್‌ಸೈಟನಲ್ಲಿ ಅಪಲೋಡ್ ಮಾಡಿ ಮತ್ತು ಡಕಾಯಿಸಿ ಪ್ರಸಿದ್ದಿ ಪಡಿಸಿದ ದಿನಾಂಕವನ್ನು ಈ ಕಚೇರಿಗೆ ತಿಳಿಸಲು ಗೌರವಗಳೊಂದಿಗೆ ಸಲ್ಲಿಸಿದೆ.

2. ಮಾನ್ಯ ವಿಶೇಷ ಜಿಲ್ಲಾಧಿಕಾರಿಗಳು, ಪುಪು, ಭೂಸ್ವಾಧೀನ, ಕೃಮೇಯೋ, ಜಮಖಂಡಿ ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.
3. ಮಾನ್ಯ ಉಪ ವಿಭಾಗಾಧಿಕಾರಿಗಳು, ಜಮಖಂಡಿ ರವರಿಗೆ ಸಲ್ಲಿಸುತ್ತ, ತಮ್ಮ ಕಚೇರಿಯ ನೋಟಿಸು ಬೋರ್ಡಿಗೆ ಪ್ರಸಿದ್ದಿಪಡಿಸಿ, ಪ್ರಸಿದ್ದಿ ಪಡಿಸಿದ ದಿನಾಂಕವನ್ನು ಈ ಕಚೇರಿಗೆ ತಿಳಿಸಲು ಗೌರವಗಳೊಂದಿಗೆ ಸಲ್ಲಿಸಿದೆ.
4. ತಹಶಿಲ್ದಾರರು ಮುಧೋಳ ರವರಿಗೆ, ತಮ್ಮ ಕಚೇರಿಯ ನೋಟಿಸು ಬೋರ್ಡಿಗೆ ಪ್ರಸಿದ್ದಿಪಡಿಸಿ, ಪ್ರಸಿದ್ದಿ ಪಡಿಸಿದ ದಿನಾಂಕವನ್ನು ಈ ಕಚೇರಿಗೆ ತಿಳಿಸಲು ವಿನಂತಿಸಿದೆ.
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪುನರವಸತಿ ಉಪವಿಭಾಗ ನಂ. 11, ಕೃಮೇಯೋ, ಮುಧೋಳ ರವರಿಗೆ ತಮ್ಮ ಕಚೇರಿಯ ನೋಟಿಸು ಬೋರ್ಡಿಗೆ ಪ್ರಸಿದ್ದಿಪಡಿಸಿ, ಪ್ರಸಿದ್ದಿ ಪಡಿಸಿದ ದಿನಾಂಕವನ್ನು ಈ ಕಚೇರಿಗೆ ತಿಳಿಸಲು ಕೋರಲಾಗಿದೆ.
6. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕಾ ಪಂಚಾಯತ, ಮುಧೋಳ ರವರಿಗೆ, ತಮ್ಮ ಕಚೇರಿಯ ನೋಟಿಸು ಬೋರ್ಡಿಗೆ ಪ್ರಸಿದ್ದಿಪಡಿಸಿ, ಪ್ರಸಿದ್ದಿ ಪಡಿಸಿದ ದಿನಾಂಕವನ್ನು ಈ ಕಚೇರಿಗೆ ವರದಿ ಸಲ್ಲಿಸಲು ತಿಳಿಸಲಾಗಿದೆ
7. ಗ್ರಾಮ ಲೆಕ್ಕಾಧಿಕಾರಿಗಳು, ಹಲಗಲಿ ತಾ: ಮುಧೋಳ ಇವರಿಗೆ ತಮ್ಮ ಕಚೇರಿಯ ನೋಟಿಸು ಬೋರ್ಡಿಗೆ ಪ್ರಸಿದ್ದಿಪಡಿಸಿ, ಪ್ರಸಿದ್ದಿ ಪಡಿಸಿದ ದಿನಾಂಕವನ್ನು ಈ ಕಚೇರಿಗೆ ವರದಿ ಸಲ್ಲಿಸಲು ಹಾಗೂ ದಿನಾಂಕ 05-12-2018 ರಂದು ಮುಂಜಾನೆ 11.30 ಗಂಟೆಗೆ ತಮ್ಮ ಕಚೇರಿಯ ಗ್ರಾಮಚಾವಡಿಯಲ್ಲಿ ಏರ್ಪಡಿಸಿದ ಅಹವಾಲು ಸ್ವೀಕಾರ ಗ್ರಾಮಸಭೆ ಕುರಿತು ಡಂಗೂರ ಸಾರಲು ತಿಳಿಸಲಾಗಿದೆ.

ಆಡಳಿತಾಧಿಕಾರಿ ಹಾಗೂ
ಪುನರ್ ವಸತಿ ಅಧಿಕಾರಿಗಳು
ಕೃಮೇಯೋ, ಬೀಳಗಿ.

ಪುನರ್ವಸತಿ ಅಧಿಕಾರಿಗಳ ಕಾರ್ಯಾಲಯ, ಕೃಮೇ.ಯೋ. ಬೀಳಗಿ, ಜಿಲ್ಲೆ: ಬಾಗಲಕೋಟ

# ಬೀಳಗಿ ತಾಲೂಕಿನ ಕೊಪ್ಪ ಎಸ್.ಕೆ. ಪುನರವಸತಿ ಕೇಂದ್ರ ನಿರ್ಮಾಣಕ್ಕಾಗಿ ಹೆಚ್ಚುವರಿ ಜಮೀನು ಭೂಸ್ವಾಧೀನಗಾಗಿ ಮುಧೋಳ ತಾಲೂಕಿನ ಹಲಗಲಿ ಗ್ರಾಮದ ಕೆಲವು ಜಮೀನುಗಳು ಭೂಸ್ವಾಧೀನವಾಗುವ ಜಮೀನು ಮಾಲೀಕರುಗಳ ಕುಟುಂಬಗಳ ಗಣತಿ ವಿವರಗಳು

ಎಲ್.ಎಕ್ಯೂ/ಎಸ್.ಆರ್–33/2013–14 (ಅಧೀಕ/ಹೆಚುವರಿ)

ಕರ್ನಾಟಕ ಸರ್ಕಾರ

**ಕೃಷ್ಣಾ ಮೇಲ್ದಂಡೆ ಯೋಜನೆ**

ಕ್ರಮಾಂಕ:ಮಅಬಿ/ಆರ್.ಆರ್.ಎ.ಪಿ/ಹಲಗಲಿ /2018-19 ದಿನಾಂಕ:27/11/2018

ಬೀಳಗಿ ತಾಲೂಕಿನ ಕೊಪ್ಪ ಎಸ್.ಕೆ. ಪುನರವಸತಿ ಕೇಂದ್ರ ನಿರ್ಮಾಣಕ್ಕಾಗಿ ಹೆಚ್ಚುವರಿ ಜಮೀನು (ಅಧಿಕ/ಹೆಚ್ಚುವರಿ) ಭೂಸ್ವಾಧೀನತೆ ಕುರಿತು ಮುಧೋಳ ತಾಲೂಕು ಹಲಗಲಿ ಗ್ರಾಮದ ಕೆಲವು ಜಮೀನುಗಳು ಎಲ್.ಎ.ಕ್ಯೂ/ಎಸ್.ಆರ್-33/2013-14 (ಅಧಿಕ/ಹೆಚ್ಚುವರಿ) ಭೂಸ್ವಾಧೀಗೊಳ್ಳುವ ಜಮೀನು ಮಾಲೀಕರಿಗಾಗಿ ಪುನರ್ವಸತಿ ಹಾಗೂ ಪುನರ್‌ನಿರ್ಮಾಣ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ ಅಧಿನಿಯಮ 2013" (The Right Fair Compensation, Transparency in Land Acquisition Rehabilitation and Resettlement Act-2013)

ಕಲಂ 16(2) ರನ್ವಯ ಪುನರ್ ವಸತಿ ಹಾಗೂ ಪುನರ್ ವ್ಯವಸ್ಥೆಯ ಕರಡು ಯಾದಿ

ಜಿಲ್ಲೆ: ಬಾಗಲಕೋಟ ತಾಲೂಕು: ಮುಧೋಳ ಗ್ರಾಮ : ಹಲಗಲಿ ಹೋಬಳಿ: ಮುಧೋಳ

**ಪ್ರಸ್ತಾವನೆ:**

1 ಜನರಿಗೆ ಪುನರವಸತಿ ಮತ್ತು ಪುನರವ್ಯವಸ್ಥೆಯ ಕರಡು ಪರಿ ಯೋಜನೆ ಕುರಿತು ನಿಯಮಗಳಲ್ಲಿ ಉಪಬಂಧಿಸುವ ರೀತಿಗಳಲ್ಲಿ ಅರಿವು ಮೂಡಿಸಲಾಗಿದೆ.

2)ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರವಸತಿ ಮತ್ತು ಪುನರ ವ್ಯವಸ್ಥೆ ಅಧಿನಿಯಮ 2013 ರನ್ವಯ ಕಲಂ 11(1) ರಲ್ಲಿ 28-06-2017 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಲಾಗಿರುತ್ತದೆ.

3)ಪುನರವಸತಿ ಪುನರವ್ಯವಸ್ಥೆಯ ಈ ಕರಡು ಯಾದಿಯನ್ನು ಸರ್ವೇ (ಸಂಯುಕ್ತ ಮೋಜಣಿ ಸರ್ವೇ) ಗಣತಿಯ ಸಮೀಕ್ಷಾ ವರದಿ, ವಂಶಾವಳಿ ಮತ್ತು ಕಲಂ 11(1) ರ ಅಧಿಸೂಚನೆಯ ಪ್ರಕಟಣೆಯನ್ನು ಆಧಾರವಾಗಿ ಇಟ್ಟುಕೊಂಡು ತಯಾರಿಸಲಾಗಿದೆ.

4)ಸದರಿ ಭೂಸ್ವಾಧೀನಕ್ಕೆ ಒಳಪಡುವ ಕ್ಷೇತ್ರದಲ್ಲಿ ಸಾರ್ವಜನಿಕ ಮತ್ತು ಸರ್ಕಾರಿ ಕಟ್ಟಡಗಳು ಒಳಪಟ್ಟಿರುವುದಿಲ್ಲ.

5) ಈ ಕರಡು ಯಾದಿಯು ಕಲಂ 16, 16(4), 16(5) ರನ್ವಯ ಕ್ಲೇಮು ಹಾಗೂ ಆಕ್ಷೇಪಣೆಗಳ ಕುರಿತು ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮಗಳನ್ನು ಏರ್ಪಡಿಸಿ ಸಂದರ್ಭನುಸಾರ ಬದಲಾವಣೆಗೆ ಒಳಪಟ್ಟಿರುತ್ತದೆ.

6) ಮುಧೋಳ ತಾಲೂಕಿನ ಹಲಗಲಿ ಗ್ರಾಮದ ಕೆಲವು ಜಮೀನುಗಳು ಕೊಪ್ಪ ಎಸ್.ಕೆ. ಪುನೆವಸತಿ ಕೇಂದ್ರಕ್ಕಾಗಿ ಹೆಚ್ಚುವರಿ ಜಮೀನು ಭೂಸ್ವಾಧೀನತೆ ಕುರಿತು ಹಲಗಲಿ ಗ್ರಾಮದ ಜಮೀನುಗಳು ಬಾಧಿತಗೊಳ್ಳುವ ಕುಟುಂಬಗಳಿಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು ಪುನರವಸತಿ ಮತ್ತು ಪುನರ ವ್ಯವಸ್ಥೆ ಅಧಿನಿಯಮ 2013 (The Right Fair Compensation, Transparency in Land Acquisition Rehabilitation and Resettlement Act-2013) ಸದರಿ ಅಧಿನಿಯಮದ ಅನುಸೂಚಿ 2 ರ ಅನುಸಾರ ಹಾಗೂ ಕಲಂ 31 ರ ರನ್ವಯ ಪುನರವಸತಿ ಹಾಗೂ ಪುನರ್ ವ್ಯವಸ್ಥೆಯ ಐತೀರ್ಪು ರಚಿಸಲಾಗುವುದು ಎಂದು ಉದ್ದೇಶಿಸಲಾಗಿದೆ.

7) ಹಲಗಲಿ ಗ್ರಾಮದ ಸದರಿ ಪ್ರಕರಣದ ಕಲಂ 11(1) ರ ಅಧಿಸೂಚನೆಯ ಅನ್ವಯ ಭೂ ಸ್ವಾಧೀನಕ್ಕೆ ಒಳಪಡುವ ಕ್ಷೇತ್ರವು 100 ಎಕರೆಗಿಂತ ಕಡಿಮೆ ಇರುವುದರಿಂದ ಹೊಸ ಭೂ ಸ್ವಾಧೀನ ಕಾಯ್ದೆಯ ಕಲಂ 45 ರ ನಿಬಂಧನೆಗಳು ಅನ್ವಯಿಸುವುದಿಲ್ಲ.

8) ಸರಕಾರವು ಕಾಲ ಕಾಲಕ್ಕೆ ಹೊರಡಿಸುವ ಕಾಯ್ದೆ, ಕಾನೂನು ನಿಯಮಗಳ ಅನ್ವಯ ಸದರಿ ಕರಡು ಯಾದಿಯು ಬದಲಾವಣೆಗೆ ಒಳಪಟ್ಟಿರುತ್ತದೆ.

9) ಭೂಸ್ವಾಧೀನಕ್ಕೆ ಒಳಪಡುವ ಜಮೀನುಗಳು ವಹಿವಾಟುಗಳ ಪ್ರಕಾರ ಪೋಡಿಯಾಗಬೇಕಾಗಿದ್ದಲ್ಲಿ ಸಂಬಂಧಪಟ್ಟ ದಾಖಲೆಗಳನ್ನು ಭೂ ಮಾಲೀಕರು ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಹಾಜರಪಡಿಸಬೇಕು.